# Current affairs of 2018-08-03 by KPSCVAANI.com

## * ಭ್ರಷ್ಟಾಚಾರ ತಡೆಯುವ ಹೊಸ ಕಾಯಿದೆ ಇಂದಿನಿಂದ ಜಾರಿ ಲಂಚ ಕೊಟರೂ ಜೈಲು



ದೇಶಾದ್ಯಂತ ಇನ್ನು ಮುಂದೆ ಲಂಚ ಸ್ವೀಕಾರ ಮಾತ್ರವಲ್ಲ ಲಂಚ ಕೊಡುಮದೂ, ಲಂಚದ ಆಮಿಷ ಒಡ್ಡುಮದು ಸಹ ಶಿಕ್ಷಾರ್ಹ ಅಪರಾಧವಾಗಲಿದೆ. ಲಂಚ ನೀಡಿದವರಿಗೆ ಗರಿಷ್ಠ 7 ವರ್ಷ ಜೈಲು ಶಿಕ್ಷೆ ಜತೆಗೆ ದಂಡ ಬೀಳಲಿದೆ. ಸರಕಾರಿ ಕಚೇರಿಗಳಲ್ಲಿ ವ್ಯಾಪಕವಾಗಿ ರುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸರಕಾರ ಮಂಡಿಸಿದ ‘ಭ್ರಷ್ಟಾಚಾರ ತಡೆ (ತಿದ್ದುಪಡಿ) ವಿಧೇಯಕ –1988ಕ್ಕೆ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಅಂಕಿತ ಹಾಕಿದ್ದು, ಕಠಿಣ ಕಾನೂನು ದೇಶಾದ್ಯಂತ ಜಾರಿಗೆ ಬಂದಿದೆ. ಶಿಕ್ಷೆ ಪ್ರಮಾಣ ಏರಿಕೆ ಪರಿಷತ ಕಾಯಿದೆಯಲ್ಲಿ ಲಂಚ ಪಡೆದ ಆರೋಪಿಯ ಶಿಕ್ಷೆಯ ಪ್ರಮಾಣವನ್ನು ಹೆಚ್ಚಿಸಲಾಗಿದ್ದು, ಕನಿಷ್ಠ 3 ವರ್ಷ, ಜೈಲು ಶಿಕ್ಷೆಬೀಳಲಿದೆ. ಸೆರೆವಾಸವನ್ನು 7 ವರ್ಷಕ್ಕೆ ವಿಸ್ತರಿಸಲೂ ಅವಕಾಶವಿದೆ.

## * ಆಧಾರ್ ಇದ್ದರೆ ಆರೋಗ್ಯ ಕರ್ನಾಟಕ ಯೋಜನೆಯಡಿ ಚಿಕಿತ್ಸೆ

‘ಆರೋಗ್ಯ ಸೇವೆಗೆ ಕಾರ್ಡ್ ಬೇಕಿಲ್ಲ’ ಚಿಕಿತ್ಸಾ ಸೌಲಭ್ಯಗಳು : ಬಿಪಿಎಲ್ ಕುಟುಂಬಕ್ಕೆ ಐದು ಸದಸ್ಯರ ವರೆಗೆ ನಿರ್ದಿಷ್ಟ ಕ್ಲಿಷ್ಟಕರ ದ್ವಿತೀಯ ಹಂತದ ಚಿಕಿತ್ಸೆಗೆ ವರ್ಷಕ್ಕೆರೂ 30 ಸಾವಿರದ ವರೆಗೆ ಆರ್ಥಿಕ ನೆರಮ. ತೃತೀಯ ಹಂತದ ಕಾಯಿಲೆಗಳಾದ ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರಪಿಂಡದ ಕಾಯಿಲೆ, ಪಾಲಿಟ್ರಾಮ, ಸುಟ್ಟ ಗಾಯ, ನವಜಾತ ಶಿಶುಗಳು ಮತ್ತು ಮಕ್ಕಳ ಕಾಯಿಲೆಗಳಿಗೆ ವರ್ಷಕ್ಕೆರೂ 1.50 ಲಕ್ಷ ರೂ ನೆರಮ. ತುರ್ತು ಚಿಕಿತ್ಸಾ ಸಂದರ್ಭ ಬಂದಲ್ಲಿ ಮತ್ತೆ ರೂ 50 ಸಾವಿರ ನೆರಮ. ಸಾಮಾನ್ಯ ರೋಗಿಗಳಿಗೆ (ಎಪಿಎಲ್) ಪ್ಯಾಕೇಜ್ ಮೊತ್ತದ ಶೇ 30ರಷ್ಟನ್ನು ಸರ್ಕಾರ ಪಾವತಿ. ಆರ್ಥಿಕ ನೆರವನ್ನುರೂ 5 ಲಕ್ಷಕ್ಕೆ ಏರಿಸಲು ರಾಜ್ಯ ಸರ್ಕಾರದ ಚಿಂತನೆ.

## * ಆಡಳಿತ ವ್ಯವಸ್ಥೆಯಲ್ಲಿ ಡ್ರೋಣ್ ಬಳಕೆ



ಕೃಷಿ, ನಗರ ಯೋಜನೆ, ಟ್ರಾಫಿಕ್ ನಿರ್ವಹಣೆಗೆ ಬಳಸಲು ನಿರ್ಧಾರ ಸ್ಯಾಟಲೈಟ್‌ ನಿಖರ : ಸ್ಯಾಟಲೈಟ್‌ಗಳು ಅಬ್ಬಬ್ಬಾ ಎಂದರೆ 30 ಸೆಂ.ಮೀ ಅಂತರದಿಂದ ಚಿತ್ರಗಳು ಸೆರೆಹಿಡಿದು ಕಳುಹಿಸುತ್ತವೆ. ಮೋಡ ಕವಿದ ವಾತಾವರಣದಲ್ಲಿ ಚಿತ್ರಗಳು ಅಸ್ಪಷ್ಟವಾಗಿರುತ್ತವೆ. ಆದರೆ ಡ್ರೋಣ್ ಗಳು ಕೇವಲ 2-4 ಸೆಂ.ಮೀ. ಅಂತರದಿಂದ ಚಿತ್ರಗಳನ್ನು ಸೆರೆಹಿಡಿಯುತ್ತವೆ. ಅಷ್ಟೇ ಅಲ್ಲ 3ಡಿ ಯಲ್ಲಿ ಅತ್ಯಧಿಕ ರೆಸೋಲ್ಯುಷನ್‌ನಲ್ಲಿ ನೋಡಬಹುದು. ಹಾಗಾಗಿ ,ಡ್ರೋಣ್ ಹೆಚ್ಚು ನಿಖರ ಮಾಹಿತಿ ನೀಡುತ್ತದೆ

## * ಜೇನುನೊಣಕ್ಕೆ ರಾಜ್ಯ ಕೀಟ ಮನ್ನಣೆ ನೀಡಲು ಶಿಫಾರಸು .



ಜೇನುಹುಳು ವಿಶಿಷ್ಟ ಕೀಟ, ಪರಿಸರ ಸಮತೋಲನೆಗೆ ಹಾಗೂ ಪರಾಗಸ್ಪರ್ಶ ಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಇಂದಿನ ಮಾಲಿನ್ಯ ಪರಿಸರ ಹಾಗೂ ಕೃಷಿಯಲ್ಲಿನ ರಾಸಾಯನಿಕ ಬದುಕಿನಿಂದಾಗಿ ಜೇನುಹುಳು ಸಂತತಿ ಕಡಿಮೆಯಾಗುತ್ತಿದೆ. ರಾಜ್ಯ ಕೀಟ ಮನ್ನಣೆ ಉತ್ತಮ ಆಲೋಚನೆ. ಇದರಿಂದಾದರೂ ಸಂತತಿ ವೃದ್ಧಿಗೆ ಸಹಾಯವಾಗಬಹುದು.

## * ಕೊಡಗಿನ ಉತ್ತಯ್ಯ ನೌಕಾಪಡೆ ನೂತನ ಉಪ ಮುಖ್ಯಸ್ಥ

ನೌಕಾಪಡೆಯಲ್ಲಿ ಈ ಹುದ್ದೆಗೆ ಏರಿದ ಮೊದಲ ಕೊಡವ ಎಂಬ ಹಿರಿಮೆಗೆ ಉತ್ತಯ್ಯ ಭಾಜನರಾಗಿದ್ದಾರೆ.

## * ಹಿಂದುಳಿದ ಆಯೋಗಕ್ಕೆ ಸಾಂವಿಧಾನಿಕ ಸ್ಥಾನಮಾನ

ರಾಷ್ಟ್ರೀಯ ಹಿಂದುಳಿದ ಆಯೋಗಕ್ಕೆ ಸಾಂವಿಧಾನಿಕ ಸ್ಥಾನಮಾನ ನೀಡುವ ವಿಧೇಯಕವನ್ನು ಲೋಕಸಭೆ ಗುರುವಾರ ಅವಿರೋಧವಾಗಿ ಅಂಗೀಕರಿಸಿದೆ.

## * ವ್ಯಭಿಚಾರಕ್ಕೆ ಶಿಕ್ಷೆ ಕಾಯ್ದೆ ಅಸಾಂವಿಧಾನಿಕ




ಐಪಿಸಿ ಸೆಕ್ಷನ್ 497 ಏನು ಹೇಳುತ್ತದೆ ಇನ್ನೊಬ್ಬನ ಹೆಂಡತಿಯ ಜತೆಗೆ ಆತನ ಸಹಮತ ಇಲ್ಲದೆ ಲೈಂಗಿಕ ಸಂಪರ್ಕ ನಡೆಸುವುದನ್ನು ಅತ್ಯಾಚಾರ ಎಂದು ಪರಿಗಣಿಸಲಾಗದು. ಆದರೆ ಇದು ಶಿಕ್ಷಾರ್ಹ ಅಪರಾಧ. ಈ ಅಪರಾಧಕ್ಕೆ ಐದು ವರ್ಷಗಳವರೆಗೆ ಜೈಲು ಅಥವಾ ದಂಡ ಅಥವಾ ಎರಡನ್ನೂ ವಿಧಿಸುವುದಕ್ಕೆ ಅವಕಾಶ ಇದೆ.ಇಂತಹ ಪ್ರಕರಣದಲ್ಲಿ ಹೆಂಡತಿಗೆ ಶಿಕ್ಷೆ ಕೊಡಲು ಅವಕಾಶ ಇಲ್ಲ ಎಂದು ಸೆಕ್ಷನ್ 497 ಹೇಳುತ್ತದೆ. ಕೇಂದ್ರದ ನಿಲುವು ಏನು : ವ್ಯಭಿಚಾರಕ್ಕೆ ಇರುವ ಶಿಕ್ಷೆಯನ್ನು ರದ್ದುಪಡಿಸುವುದು ಭಾರತೀಯ ಸಂಸ್ಕೃತಿಗೆ ವಿರುದ್ದವಾಗಿದೆ. ಹೀಗೆ ಮಾಡಿದರೆ ಅದು ವಿವಾಹ ಎಂಬ ಸಾಮಾಜಿಕ ಸಂಸ್ಥೆಯನ್ನು ನಾಶಪಡಿಸುತ್ತದೆ ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ಕೇಂದ್ರ ಸರ್ಕಾರ ಹೇಳಿತ್ತು. ಕೋರ್ಟ್ ಹೇಳಿದ್ದೇನು? ವಿವಾಹೇತರ ಸಂಬಂಧ ಇದೆ ಎಂಬುದೇ ಮದುವೆ ಮುರಿದು ಬಿದ್ದಿದೆ ಎಂಬುದರ ಸೂಚನೆ. ಲೈಂಗಿಕ ಸಂಪರ್ಕ ಬೇಡ ಎಂದು ಹೇಳುವ ಹಕ್ಕು ಮಹಿಳೆಗೆ ಇದೆ ಎಂದಾದರೆ, ಲೈಂಗಿಕ ಸ್ವಾಯತ್ತೆಯೂ ಇದೆ. ಮದುವೆ ಆಗಿದೆ ಎಂಬ ಕಾರಣಕ್ಕೆ ಮಹಿಳೆಯ ಲೈಂಗಿಕ ಸ್ವಾಯತ್ತೆಯ ಹಕ್ಕು ಮೊಟಕಾಗದು.

## * ಇಜಿಡಿಐ ಪಟ್ಟಿಯಲ್ಲಿ 96ಕ್ಕೆ ಜಿಗಿದ ಭಾರತ




ಜಾಗತಿಕ ಇ-ಸರ್ಕಾರಿ ಅಭಿವೃದ್ಧಿ ಸೂಚ್ಯಂಕದಲ್ಲಿ (ಇಜಿಡಿಐ) ಭಾರತ ಟಾಪ್ 96ನೇ ಸ್ಥಾನ ಪಡೆದಿದೆ. ಇಜಿಡಿಐ ಸೂಚ್ಯಂಕವನ್ನು ವಿಶ್ವಸಂಸ್ಥೆ ದ್ವೈವಾರ್ಷಿಕವಾಗಿ ಪ್ರಕಟಿಸುತ್ತದೆ. ಪರಿಗಣಿಸಲ್ಪಟ್ಟಿರುವ ಪ್ರಮುಖ ಅಂಶಗಳು : ದೂರಸಂಪರ್ಕ ಮತ್ತು ಮೂಲ ಸೌಕರ್ಯ ಸೂಚ್ಯಂಕ (ಟಿಟಿಐ). ಮಾನವಸಂಪನ್ಮೂಲ ಸೂಚ್ಯಂಕ. (ಎಚ್ ಸಿ ಐ) ಅಗ್ರ 5 ದೇಶಗಳು : 1.ಡೆನ್ಮಾರ್ಕ್ 2. ಆಸ್ಟ್ರೇಲಿಯಾ 3.ದಕ್ಷಿಣ ಕೊರಿಯಾ 4. ಇಂಗ್ಲೆಂಡ್ 5.ಸ್ವೀಡನ್

## * ಗಣಿತ ನೊಬೆಲ್ ಎಂದೇ ಖ್ಯಾತಿ ಪಡೆದಿರುವ ಪ್ರಶಸ್ತಿ



ಭಾರತ ಸಂಜಾತನಿಗೆ ಫೀಲ್ಡ್ಸ್ ಮೆಡಲ್’ ಗಣಿತಜ್ಞ ಅಕ್ಷಯ್ ವೆಂಕಟೇಶ್ ಅವರು ಗಣಿತ ವಿಭಾಗದಲ್ಲಿ ನೀಡಲಾಗುವ ಅತ್ಯುನ್ನತ ಫೀಲ್ಡ್ಸ್ ಮೆಡಲ್ ಗೌರವಕ್ಕೆ ಪಾತ್ರರಾಗಿದ್ದಾರೆ. ರಿಯೊ ಡಿ ಜನೈರೊದ ಅಂತರರಾಷ್ಟ್ರೀಯ ಗಣಿತಜ್ಞರ ಸಮ್ಮೇಳನದಲ್ಲಿ ಒಟ್ಟು ನಾಲ್ವರು ಗಣಿತಜ್ಞರಿಗೆ ಈ ಪ್ರಶಸ್ತಿ ನೀಡಲಾಗಿದೆ. ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿರುವ ಕೌಚರ್ ಬಿರ್ಕರ್, ಜರ್ಮನಿಯ ಪೀಟರ್ ಸ್ಕಾಲ್ಜ್ ಹಾಗೂ ಇಟಲಿಯ ಇಟಿಎಚ್ ಜೂರಿಕ್ ಪ್ರಶಸ್ತಿ ಪಡೆದ ಇತರ ಮೂವರು ಗಣಿತಜ್ಞರು.

## * ಗಮನ ಸೆಳೆಯುತ್ತಿರುವ ಗೋಲ್ಡನ್ ಬ್ರಿಡ್ಜ್



ವಿಶ್ವದಲ್ಲೇ ಅತ್ಯಂತ ವೇಗವಾಗಿ ಪ್ರವಾಸೋದ್ಯಮ ಕ್ಷೇತ್ರ ವನ್ನು ಅಭಿವೃದ್ಧಿಪಡಿಸುತ್ತಿರುವ ದೇಶ ಎಂಬ ಹೆಗ್ಗಳಿಕೆಗೂ ವಿಯೆಟ್ನಾಂ ಪಾತ್ರವಾಗಿದೆ.

## * ಯುದ್ಧಾನುಕೂಲ ವಾಣಿಜ್ಯ ಪಾಲುದಾರ – 1 ಸ್ಥಾನ ನೀಡಿದ ಅಮೆರಿಕ

ಅಮೆರಿಕ ತನ್ನ ಯುದ್ಧಾನುಕೂಲ ವಾಣಿಜ್ಯ ಪಾಲುದಾರ-1(ಎಸ್‌ಟಿಎ)ಸ್ಥಾನವನ್ನು ಭಾರತಕ್ಕೆ ನೀಡಿದೆ. ಏಷ್ಯಾದಲ್ಲಿ ಜಪಾನ್ ಮತ್ತು ದಕ್ಷಿಣ ಕೊರಿಯಾ ಮಾತ್ರ ಈ ಸ್ಥಾನ ಪಡೆದಿದ್ದು, ಭಾರತ ಮೂರನೆ ರಾಷ್ಟ್ರವಾಗಿದೆ. ಏನಿದು ಎಸ್‌ಟಿಎ?: ಅಮೆರಿಕ ತನ್ನ ಅತ್ಯಾಪ್ತ ದೇಶಗಳಿಗೆ ನೀಡುವ ಮುಕ್ತ ವ್ಯಾಪಾರ ಸನ್ನದು ಭಾರತಕ್ಕಾಗುವ ಲಾಭ : ಎಸ್‌ಟಿಎ ಸೇರ್ಪಡೆಯಿಂದ ಅಮೆರಿಕದ ಅತ್ಯುನ್ನತ ದರ್ಜೆಯ ರಕ್ಷಣಾ ತಂತ್ರಜ್ಞಾನ ಸೇರಿದಂತೆ ಇತರೆ ಕ್ಷೇತ್ರಗಳ ತಂತ್ರಜ್ಞಾನ ಪಡೆಯಲು ಭಾರತಕ್ಕೆ ಅವಕಾಶ ಕಲ್ಪಿಸುತ್ತದೆ. ಹೆಚ್ಚುತ್ತಿರುವ ಚೀನಾ ಮತ್ತು ಪಾಕಿಸ್ತಾನದ ಸೇನಾ ಬೆದರಿಕೆಗಳನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗುತ್ತದೆ. ಸೇನಾ ಪಡೆಗಳ ಆಧುನೀಕರಣಕ್ಕೆ ಚಾಲನೆ ನೀಡಿರುವ ಭಾರತ ಅಮೆರಿಕದ ಅತ್ಯುನ್ನತ ತಂತ್ರಜ್ಞಾನದ ಶಸ್ತ್ರಾಸ್ತ್ರಗಳಿಂದ ಮತ್ತಷ್ಟು ಬಲಿಷ್ಠವಾಗಲಿದೆ. ಅಮೆರಿಕದ ಕಂಪನಿಗಳು ಭಾರತದೊಂದಿಗೆ ಪರವಾನಗಿ ಮುಕ್ತವಾಗಿ ವ್ಯವಹರಿಸಲು ಅವಕಾಶ ಕಲ್ಪಿಸುತ್ತದೆ. ಇದು ಒಂದು ರೀತಿಯಲ್ಲಿ ನ್ಯಾಟೊ ರಾಷ್ಟ್ರಗಳಿಗೆ ನೀಡಿದ ಸ್ಥಾನಮಾನ.

## * ಜೈವಿಕ ಇಂಧನ ನೀತಿ ಕಾರ್ಯರೂಪಕ್ಕೆ

ಜೈವಿಕ ಇಂಧನದ ಬಗ್ಗೆ ಕೇಂದ್ರ ಬಿಡುಗಡೆ ಮಾಡಿರುವ ರಾಷ್ಟ್ರೀಯ ನೀತಿಯನ್ನು ಕಾರ್ಯರೂಪಕ್ಕೆ ತಂದ ಮೊದಲ ರಾಜ್ಯ ಎಂಬ ಹೆಗ್ಗಳಿಕೆ ರಾಜಸ್ಥಾನದ ಪಾಲಾಗಿದೆ. ನೀತಿಯಂತೆ ರಾಜ್ಯದಲ್ಲಿ ತೈಲ ಬೀಜಗಳ ಬೆಳೆಗಳ ಹೆಚ್ಚಳಕ್ಕೆ ಕ್ರಮ ಮತ್ತು ಉದಯಪುರದಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಆರಂಭಿಸಲು ನಿರ್ಧರಿಸಿದೆ.

## * ಲಕ್ಷ ಕೋಟಿ ಡಾಲರ್ ಮೌಲ್ಯ ದಾಟಿದ ಜಗತ್ತಿನ ಮೊದಲ ಕಂಪನಿ ಆ್ಯಪಲ್



68 ಲಕ್ಷ ಕೋಟಿ ರೂ. ಮೌಲ್ಯದ ಕಂಪನಿ ವಿಶ್ವ ವಿಖ್ಯಾತ ಐಫೋನ್ ಉತ್ಪಾದಕ, ಅಮೆರಿಕದ ಆ್ಯಪಲ್ ಕಂಪನಿಯು ಈಗ ವಿಶ್ವದ ಮೊಟ್ಟಮೊದಲ ಲಕ್ಷ ಕೋಟಿ ಡಾಲರ್ ಮಾರುಕಟ್ಟೆ ಮೌಲ್ಯದ ಕಂಪನಿಯಾಗಿ ಹೊರಹೊಮ್ಮಿದೆ. ಐಫೋನ್ ಜನಕ : ಅಮೆರಿಕದ ತಂತ್ರಜ್ಞಾನ ದಿಗ್ಗಜ ಆ್ಯಪಲ್ ಕ್ಯಾಲಿಫೋರ್ನಿಯಾದ ಕ್ಯುಪರ್ಟಿನೊದಲ್ಲಿ ಪ್ರಧಾನ ಕಚೇರಿಯನ್ನು ಹೊಂದಿದೆ. ಸ್ಟೀವ್ ಜಾಬ್, ಸ್ಟೀವ್ ವಾಜಿಕ್, ರೊನಾಲ್ಡ್ ವೈನೆ ಮೂವರು ಸೇರಿ ಸ್ಥಾಪಿಸಿದ ಕಂಪನಿಯಿದು. 1980ರಲ್ಲಿ ಷೇರು ಮಾರುಕಟ್ಟೆಯನ್ನು ಪ್ರವೇಶಿಸಿತ್ತು . ಆದಾಯದ ದೃಷ್ಟಿಯಿಂದ ಆ್ಯಪಲ್ ವಿಶ್ವದ ಅತಿ ದೊಡ್ಡ ತಂತ್ರಜ್ಞಾನ ಕಂಪನಿಯೂ ಹೌದು. ಸ್ಯಾಮ್ ಸಂಗ್ ನಂತರ ಎರಡನೇ ಅತಿ ದೊಡ್ಡ ಮೊಬೈಲ್ ಉತ್ಪಾದಕ ಕಂಪನಿಯಾಗಿದೆ.

## * ವಾಣಿಜ್ಯ ಕೋರ್ಟ್‌ಗೆ ಲೋಕಸಭೆ ಅನುಮೋದನೆ

ಭಾರತದಲ್ಲಿ ಉದ್ಯಮ ನಡೆಸಲು ಪೂರಕವಾಗಿರುವಂತೆ ಮತ್ತು ವಾಣಿಜ್ಯ ವ್ಯಾಜ್ಯಗಳ ವಿಚಾರಣೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಅನುಕೂಲವಾಗುವಂತಹ ಈ ಮಸೂದೆಗೆ ಲೋಕಸಭೆಯಲಿ ಅನುಮೋದನೆ ನೀಡಲಾಗಿದೆ. 2018ರ ಮೇ ತಿಂಗಳಿನಲ್ಲಿ ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಲಾಗಿದ್ದ ಕಮರ್ಷಿಯಲ್ ಕೋರ್ಟ್, ಕಮರ್ಷಿಯಲ್ ಡಿವಿಜನ್, ಕಮರ್ಷಿಯಲ್ ಆಪೇ ಲೆಟ್ ಡಿವಿಜನ್ ಆಫ್ ಹೈಕೋರ್ಟ್‌ಗೆ ಇದೀಗ ಕಾನೂನು ರೂಪ ಸಿಕ್ಕಿದೆ. ಇದರ ಮೂಲಕ ಹೈಕೋರ್ಟ್‌ನಲ್ಲಿ ಕಮರ್ಷಿಯಲ್ ಡಿವಿಜನ್ಸ್ ಮತ್ತು ಜಿಲ್ಲಾಮಟ್ಟದಲ್ಲಿ ಕಮರ್ಷಿಯಲ್ ಕೋರ್ಟ್ ಎನ್ನುವ ವಿಭಾಗವಿರಲಿದೆ.